# ಸಾಗರದ ಮೊದಲ ಮಾತು...

*Whiskers of the cat, webbed toes on my swimming dog: God is in the details.*
***- False Memory (Dean Koontz)***

"ಶ್ರಾವ್ಯಾ?"

"ಏನೋ?"

"ಏನಿಲ್ಲ!"

ಇಬ್ಬರೂ ಆ ಚಿಕ್ಕ ಬಸ್‌ನಿಲ್ದಾಣದ ನೆರಳಿನಲ್ಲಿ, ಬೆಂಚಿನ ಮೇಲೆ ಕುಳಿತಿದ್ದರು. ಹೊರಗಡೆ ವೈಜಾಗ್‌ನ ಆಗಸ್ಟ್ ಮಧ್ಯಾಹ್ನದ ಏರುತ್ತಿರುವ ಬಿರುಬಿಸಿಲು ಎಲ್ಲರನ್ನೂ-ಎಲ್ಲವನ್ನೂ ಕರುಣೆಯಿಲ್ಲದಂತೆ ಸುಡುತ್ತಿತ್ತು. ಅಲ್ಲದೇ ಸಮುದ್ರದೆಡೆಯಿಂದ ಬೀಸಿ ಬರುತ್ತಿದ್ದ ಬಿಸಿಗಾಳಿ ಬೇರೆ ಎಲ್ಲರೂ ಸಳಸಳನೆ ಬೆವರುವಂತೆ ಮಾಡುತ್ತಿತ್ತು.

ಅವಳು ಸ್ವಲ್ಪ ಬಿಡುಬೀಸಾಗೇ ಕುಳಿತಿದ್ದಳು. ಶಾಲೆಯ ಯೂನಿಫಾರ್ಮ್‌ನ ಬೂದಿ-ಬಿಳಿ ಚೂಡಿದಾರ್- ಸ್ವಾತಂತ್ರ್ಯ ದಿನಾಚರಣೆಗೋಸ್ಕರವೆಂಬಂತೆ ಶುಭ್ರವಾಗಿತ್ತು. ಮಡಿಸಿ ಕಟ್ಟಿದ್ದ ಒಂದೇ ಜಡೆ, ಬಿಳೀ ರಿಬ್ಬನ್ನು, ಒತ್ತೊತ್ತಾಗಿ ಕಟ್ಟಿದ್ದ ಇಷ್ಟುದ್ದದ ಮಲ್ಲಿಗೆ. ಕೈಗಳಲ್ಲಿ ಬಿಳೀ ಬಳೆಗಳು, ಕ್ಯಾನ್ವಾಸ್ ಶೂಗಳು. ಅವಳು ನಸುನಗುತ್ತ ಹೋಗಿ ಬರುವ ಜನ-ವಾಹನಗಳನ್ನು ನೋಡುತ್ತಲೇ ಅವನೊಂದಿಗೆ ಮಾತನಾಡುತ್ತಿದ್ದಳು.

"ಶ್ರಾವ್ಯಾ?"

"ಮ್?"

"ಊಹೂಂ!" ಅವಳು ಅವನೆಡೆಗೆ ನೋಡಿ ಜೋರಾಗಿ ಹಲ್ಲು ಕಿರಿದಳು. ಅವಳು ನಕ್ಕಾಗ ಅವಳ ಎಡಗೆನ್ನೆಯ ಮೇಲೆ ಸುಂದರವಾದುದೊಂದು ಗುಳಿ ಮೂಡಿತು. ಅದನ್ನು ನೋಡಿ ಅವನು ನಸುನಕ್ಕ.

"ಯಾಕೋ?"

"ಏನಿಲ್ಲ. ನಿನ್ನ ಕೆನ್ನೆ ಮೇಲಿನ ಡಿಂಪಲ್! ತುಂಬಾ ಚೆನ್ನಾಗಿ ಕಾಣುತ್ತೆ"

"ಓ, ಹೌದಾ? ನನಗೆ ಗೊತ್ತೇ ಇರಲಿಲ್ಲ! ಆಮೇಲೆ?"

"ಆಮೇಲೆ? ಆಮೇಲೇನು? ಏನೂ ಇಲ್ಲ!"

"ಓಹೋ! ಇನ್ನೇನೂ ಚೆನ್ನಾಗಿ ಕಾಣೋಲ್ವಾ?" ಅವನು ಇಕ್ಕಟ್ಟಿಗೆ ಸಿಕ್ಕಿಕೊಂಡ.

"ಹಾಗಲ್ಲ..." ಅವನು ತಡವರಿಸಿದ.

"ಮತ್ತೆ?" ಅವಳು ಅವನ ಕಣ್ಣುಗಳನ್ನೇ ದಿಟ್ಟಿಸಿದಳು.

"ನೀನು ಎಲ್ಲ ತರದಲ್ಲೂ ಚೆನ್ನಾಗಿ ಕಾಣ್ತೀಯ!" ನಿಟ್ಟುಸಿರು ಬಿಟ್ಟ.

ಅವಳು ಸಶಬ್ಧವಾಗಿ ನಕ್ಕಳು. "ಹೌದಾ? ಅದಕ್ಕೇ ಕ್ಲಾಸ್‌ನಲ್ಲಿ ಎಲ್ಲ ಹುಡುಗರೂ ಆ ಮೃದುಲಾ ಹಿಂದೆ ಬಿದ್ದಿರೋದು!"

"ಅದ್ಹೇಗೆ ನಿಂಗೊತ್ತು?"

"ಹೇಗೋ ಗೊತ್ತು! ಜೊತೆಗೆ ಆ ಹುಡುಗರ ಗುಂಪಿನಲ್ಲಿ ನೀನೂ ಇದೀಯಾಂತಲೂ ಗೊತ್ತು!"

"ಹೇ, ಇಲ್ಲಪ್ಪ. ನಾನು ಅವಳ ಹಿಂದೆ ಬಿದ್ದಿಲ್ಲ!" ಮುಂದಿನ ಪ್ರಶ್ನೆಯ ಅರಿವಿಲ್ಲದೇ ಅವನು ಛಟ್ಟನೆ ಸಮಜಾಯಿಶಿ ಕೊಟ್ಟ.

"ಹೌದಾ? ನೀನು ಯಾವ ಹುಡುಗಿ ಹಿಂದೆ ಬಿದ್ದಿದೀಯಾ, ಹಾಗಾದ್ರೆ?"

ತಾನು ಸಿಕ್ಕಿಬಿದ್ದುದು ಅವನಿಗೆ ಗೊತ್ತಾಯಿತು.

ಅವಳು ಕೆಣಕಿದಳು, "ನಿಜವಾಗ್ಲೂ ಯಾವ ಹುಡುಗಿಯ ಹಿಂದೂ ಬಿದ್ದಿಲ್ವಾ?" ಅವನು ಕೆಂಪು ಕೆಂಪಾದ ಮುಖದೊಂದಿಗೆ ಎದುರಿನ ರಸ್ತೆಯಲ್ಲಿ ಹೋಗಿಬರುತ್ತಿದ್ದ ವಾಹನ-ಜನರನ್ನು ನೋಡುತ್ತ ಪೆಚ್ಚುನಗೆ ನಕ್ಕ.

----

ಅವಳಿಗೆ ಹೋಲಿಸಿದರೆ ಅವನು ತುಂಬಾ ಮುಜುಗರದಿಂದಿದ್ದ. ಬಿಳೀ ಕ್ಯಾನ್‌ವಾಸ್ ಶೂಗಳ ಕಾಲುಗಳನ್ನು ಬೆಂಚಿನ ತಳಕ್ಕೆ ಕತ್ತರಿ ಹಾಕಿಕೊಂಡು ಕುಳಿತಿದ್ದ. ಸಣ್ಣ ಕೂದಲ ತಲೆಯ ದೊಡ್ಡ ಹಣೆಯ ಮೇಲೂ, ನೇರಾನೇರ ಮೂಗಿನ ಮೇಲೂ ಬೆವರ ಹನಿಗಳು, ಹೈಸ್ಕೂಲಿನ ಕೊನೆಯ ವರ್ಷವೆಂದು ಹೊಸದಾಗಿ ಹೊಲಿಸದಿದ್ದುದಕ್ಕೆ ಗಿಡ್ಡವಾಗಿದ್ದ ಯೂನಿಫಾರ್ಮ್‌ನ ಬಿಳೀ ಪ್ಯಾಂಟು, ಶರಟು; ಬಿಳೀ ಕೈಯಲ್ಲಿ ಮೊಬೈಲ್.

"ಶ್ರಾವ್ಯಾ?"

“ಏನೂ?”

“ಮ್... ಏನಿಲ್ಲ!”

“ಯಾಕೋ?”

“ಇವತ್ತು ಇಡೀ ದಿನ ಏನ್ಮಾಡ್ತಾ ಇದೀಯಾ?”

“ಏನ್ಮಾಡೋದು? ಮನೇಲಿರೋದು, ಅಣ್ಣ, ತಮ್ಮ ಇಬ್ರೂ ಇರ್ತಾರೆ–ಸಿಡಿ ಪ್ಲೇಯರ್‌ನಲ್ಲಿ ಯಾವುದಾದ್ರೂ ಪಿಚ್ಚರ್ ನೋಡೋದು ನನಗಂತೂ ‘ಲಿಲೋ ಅಂಡ್ ಸ್ಟಿಚ್’ ಎಷ್ಟು ಸರ್ತಿ ನೋಡಿದ್ರೂ ಇನ್ನೊಂದ್ ಸರ್ತಿ ನೋಡೋಣ ಅನ್ಸುತ್ತೆ!”

“ಹೇ! ಇವತ್ತು ಕ್ರಿಕೆಟ್ ಇದೆ, ಟೀವೀಲಿ! ಆಸ್ಟ್ರೇಲಿಯ ಮತ್ತು ಇಂಗ್ಲೆಂಡ್!”

“ಹೌದಾ?” ಅವಳು ಮುಖ ಸಪ್ಪಗೆ ಮಾಡಿಕೊಂಡಳು, “ಹಾಗಾದ್ರೆ ಇವತ್ತು ನನಗೆ ಟೀವಿ ನೋಡೋಕೇ ಆಗಲ್ಲ. ಅವರಿಬ್ರೂ ಟೀವಿ ಬಿಟ್ಟು ಕದಲೋದಿಲ್ಲ!” ತನ್ನ ಸಹೋದರರನ್ನು ನೆನಪಿಸಿಕೊಂಡಳು.

“ಹಾಗಾದ್ರೆ?”

“ಈನ್ಮಾಡೋದು, ನನ್ನ ರೂಂ ಸೇರ್ಕೊಂಡು ಏನಾದ್ರೂ ಓದ್ಕೋಳೋದು! ‘ನ್ಯಾನ್ಸಿ ಡ್ರ್ಯೂ’ ಹೊಸಾ ಪುಸ್ತಕ ತಗೊಂಡಿದೀನಿ, ಓದ್ಕೋತೀನಿ, ಹಾಗೇ ಸ್ವಲ್ಪ ಮ್ಯಾತ್ಸ್ ಪ್ರಾಬ್ಲಂಸ್ ಮಾಡ್ಕೋತೀನಿ”

ಅವನು ಅವಳ ಯೋಜನೆಯನ್ನು ಕೇಳಿ ಸುಮ್ಮನಾದ, ಅವಳ ಮರು ಪ್ರಶ್ನೆಗೆ ಕಾದ. ಅವಳು ಅವನೆಡೆಗೆ ತಿರುಗಿ ಕೊನೆಗೂ ಕೇಳಿದಳು, “ನೀನು? ನಿಂದೇನು ಪ್ಲಾನು?”

“ಮ್... ಸಧ್ಯಕ್ಕೇನೂ ಯೋಚಿಸಿಲ್ಲ!”

ಅವನ ಸುಳ್ಳು ಉತ್ತರಕ್ಕೆ ಅವಳು ನಕ್ಕಳು, “ಯಾಕೆ, ಸ್ಕೂಲ್ ಕ್ರಿಕೆಟ್‌ನ ಜಾಂಟಿ ರೋಡ್ಸ್, ಟೀವೀಲಿ ಕ್ರಿಕೆಟ್ ನೋಡೋಲ್ವಾ?”

“ಆದ್ರೆ ಇವತ್ತು ನೋಡೋಲ್ಲ!” ಅವನು ನಸುನಕ್ಕು ಅವಳೆಡೆಗೆ ತಿರುಗಿಕೊಂಡ.

“ಮತ್ತೆ?” ಅವಳು ಅವನನ್ನೇ ದಿಟ್ಟಿಸಿದಳು,

“ಶ್ರಾವ್ಯಾ?”

“ಮ್...?”

“ಮದ್ಯಾಹ್ನದ ಮೇಲೆ ಆರ್‌ಕೆ ಬೀಚ್‌ಗೆ ಹೋಗೋಣಾಂತ ಇದೀನಿ...”

ಅವಳು, ಅದಕ್ಕೇನು ಎಂಬಂತೆ “ಮ್...?” ಅಂದಳು.

“ಬರ್ತೀಯಾ ನನ್ನೊಟ್ಟಿಗೆ?”

ಅವಳು ಫಕ್ಕನೆ ನಕ್ಕುಬಿಟ್ಟಳು. ಅವಳ ಎಡಗೆನ್ನೆಯ ಗುಳಿ ಇನ್ನೂ ದೊಡ್ಡದಾಯಿತು, “ಮತ್ತೆ, ಏನೂ ಪ್ಲಾನ್ಸ್ ಇಲ್ಲಾ ಅಂದೆ?”

“ಅಂದೆ ನಿಜ, ಆದ್ರೆ ಪ್ಲಾನಿಲ್ಲ ಅಂತ ಹೇಳ್ತಾ ಇರೋವಾಗಲೇ ಈ ಪ್ಲಾನು ಹೊಳೆದುಬಿಡ್ತು!” ಅವನು ಭುಜ ಕುಣಿಸಿ ಹಲ್ಲುಕಿರಿದ.

“ಓಹೋ, ಹೇಗಿದ್ರೂ ನೀನೊಬ್ನೇ ಹೋಗೋ ಪ್ಲಾನ್ ಇತ್ತು, ಇರ್ಲೀಂತ ಸುಮ್ನೆ ನನ್ನನ್ನು ಕರೀತಿದೀಯಾ?”

“ಹೇ! ಇಲ್ಲಪ್ಪಾ. ನಾವಿಬ್ರೂ ಹೋಗೋ ಪ್ಲಾನ್ ಇದು!”

“ನಾನು ಬರೋಲ್ಲ ಅಂದ್ರೆ?”

ಅವನು ರಸ್ತೆಯ ಎದುರಿಗಿದ್ದ ಆಚೆ ಬದಿಯ ಬಸ್ ನಿಲ್ದಾಣವನ್ನು ನೋಡುತ್ತ ನುಡಿದ, “ನೀನು ಬರ್ಲಿಲ್ಲಾಂದ್ರೆ ನಾನೂ ಹೋಗೋಲ್ಲ, ಹೇಗಿದ್ರೂ ಟೀವಿಯಲ್ಲಿ ಕ್ರಿಕೆಟ್ ಇದೆಯಲ್ಲ!” ಅವಳು ನಕ್ಕಳು.

––––

“ಶ್ರಾವ್ಯಾ?”

“ಮ್...?”

“ಅಲ್ನೋಡಿದ್ಯಾ? ಆಚೆ ಕಡೆ ಬಸ್‌ಸ್ಟಾಪ್‌ನಲ್ಲಿ ಇಬ್ರು ಕುಳಿತಿದಾರಲ್ಲ, ಆವಾಗಿನಿಂದ ನಮ್ಮಿಬ್ಬರನ್ನೇ ಗಮನಿಸ್ತಿದಾರೆ ಅನ್ಸುತ್ತೆ!”

ಅವಳೂ ಆ ಕಡೆಯ ಬಸ್ ನಿಲ್ದಾಣವನ್ನು ನೋಡಿದಳು. ಅಲ್ಲಿ ಕುಳಿತ ಇಬ್ಬರು ಯುವಕರು–ದಪ್ಪಮೀಸೆಯ ಸಣ್ಣದೇಹದ ಕುಳ್ಳ ಒಬ್ಬ; ಉದ್ದ ಕೂದಲಿನ, ಮೀಸೆಯಿಲ್ಲದ ದಪ್ಪಗಿನವನೊಬ್ಬ–ಇವರನ್ನೇ ನೋಡುತ್ತ ತಮ್ಮೊಳಗೇ ಮಾತನಾಡಿಕೊಳ್ಳುತ್ತಿದ್ದರು, ನಗುತ್ತಿದ್ದರು ಕೂಡಾ.

"ಹೇಗೆ ಗೊತ್ತು, ಅವರು ನಮ್ಮನ್ನೇ ಗಮನಿಸ್ತಿದಾರೆ ಅಂತಾ?" ಅವಳು ಅವನಿಗೆ ಪಾಟೀಸವಾಲು ಹಾಕಿದಳು,

"ಆವಾಗಲಿಂದ ನೋಡ್ತಾ ಇದೀನಿ!"

"ಅವರೂ ಅದನ್ನೇ ಮಾತಾಡ್ಕೋತಾ ಇರಬಹುದು! ನಾವಿಬ್ರೂ ಇಲ್ಲಿ ಕುಳಿತು ಅವ್ರನ್ನೇ ಗಮನಿಸ್ತಾ ಇದೀವಿ ಅಂದ್ಕೋತಾ ಇರಬಹುದು" ಅವಳು ನಸುನಕ್ಕಳು,

"ಹಾಗಲ್ಲ, ನಾವ್ಯಾಕೆ ಇಬ್ಬರು ಹುಡುಗರು ಕುಳಿತಿರೋದನ್ನ ಗಮನಿಸ್ತೀವಿ?"

"ಅಂದ್ರೆ?" ಅವಳು ಛೇಡಿಸುವ ಧ್ವನಿಯಲ್ಲಿ ಕೇಳಿದಳು. ಅವನು ಮತ್ತೆ ಸಿಕ್ಕುಬಿದ್ದವನಂತೆ ಮುಖ ಮಾಡಿ ಸಮಜಾಯಿಷಿ ಕೊಡಲೆತ್ನಿಸಿದ, "ಹಾಗಲ್ಲ, ಅದು..."

"ಯಾರಿಗೆ ಗೊತ್ತು? ನನ್ನಪ್ಪ, ತನ್ನ ಮುದ್ದಿನ ಮಗಳ ಹಿಂದೆ ಸೀಕ್ರೆಟ್ ಬಾಡಿಗಾರ್ಡ್ಸ್ ಬಿಟ್ಟಿರಬಹುದು!" ಅವಳು ನಕ್ಕಳು, ಅವನೂ ನಕ್ಕ. ನಗುತ್ತಲೇ ನುಡಿದ, "ಅವರನ್ನು ನೋಡಿದ್ರೆ ಬಾಡಿಗಾರ್ಡ್ಸ್ ಅನಿಸ್ತಾರಾ ನಿನಗೆ? ಯಾರೋ ಟೂರಿಸ್ಟ್ಸ್ ಅನಿಸ್ತಾ ಇಲ್ವಾ ನಿನಗೆ? ವೈಜಾಗ್‌ನವರಂತೂ ಅಲ್ಲ, ಅವರು!"

"ಇರಬಹುದೇನೋ?" ಅನ್ನುತ್ತ ಅವಳು ತನ್ನ ಬಲಗೈ ಮಣಿಕಟ್ಟನ್ನು ಅಪ್ಪಿಕೊಂಡಿದ್ದ ಸಣ್ಣ ಗಡಿಯಾರದ ಮುಳ್ಳುಗಳನ್ನು ನೋಡಿಕೊಂಡಳು, "...ಟೈಮಾಯ್ತು!"

ಅವನು ಮತ್ತೆ ಆರ್‌ಕೆ ಬೀಚ್‌ನ ವಿಷಯವನ್ನು ಹೇಗೆ ತೆಗೆಯುವುದು ಎಂದು ಯೋಚಿಸುತ್ತ ನಿಟ್ಟುಸಿರು ಬಿಟ್ಟು ತಲೆ ಕೆರೆದುಕೊಂಡ, "ಮತ್ತೆ, ಇವತ್ತು ಮದ್ಯಾಹ್ನದ ಪ್ಲಾನು?"

"ತುಂಬಾ ಬಿಸಿಲು ಅನ್ನಿಸ್ತಾ ಇಲ್ವೇನೋ? ಬೀಚ್‌ಗೆಲ್ಲ ಸಂಜೆ ಹೋದರೇನೇ ಚಂದ!"

"ಹಾಗಾದ್ರೆ, ಇವತ್ತು ಸಂಜೆ?" ಅವನು ಆಸೆಗಣ್ಣಾಗಿ ಕೇಳಿದ.

"ಸಂಜೆ ನಾನು ಮನೆಯಿಂದ ಹೊರಗೆ ಬರೋ ಹಾಗೇ ಇಲ್ಲ, ನನ್ನಮ್ಮನ ನೂರು ಪ್ರಶ್ನೆಗಳಿಗೆ ಉತ್ತರ ಕೊಡೋವಷ್ಟರಲ್ಲಿ ರಾತ್ರಿಯಾಗಿ ಬಿಟ್ಟಿರುತ್ತೆ!" ಅವಳು ನಕ್ಕಳು, ಜೊತೆಗೇ ಅವನ ಬಿಗಿಯುತ್ತಿದ್ದ ಮುಖ ನೋಡಿ, "ಒಂದು ಕೆಲಸ ಮಾಡು, ನಿನ್ನ ಮೊಬೈಲ್ ನಂಬರ್ ಕೊಡು, ನಾನೇ ಮನೆಯಿಂದ ಫೋನ್ ಮಾಡ್ತೀನಿ." ಅಂದಳು.

"ನನ್ನ ನಂಬರ್ ಇಲ್ವಾ, ನಿನ್ನ ಹತ್ರಾ?"

"ಯಾಕೆ? ಸ್ಕೂಲ್‌ನಲಿರೋ ಎಲ್ಲ ಹುಡುಗಿಯರ ಹತ್ರ ನಿನ್ನ ನಂಬರ್ ಇದೆಯಾ?" ಅವಳ ಕಾಲೆಳೆಯುವಿಕೆಗೆ ಅವನು ಸುಮ್ಮನೆ ಹಲ್ಲು ಕಿರಿದ, ಜೇಬಿನಲ್ಲಿದ್ದ ಪೆನ್ನಿನಿಂದ ಸವೆದ ಪರ್ಸಿನೊಳಗಿನಿಂದ ಸಣ್ಣದೊಂದು ಕಾಗದದ ತುಂಡು ತೆಗೆದುಕೊಂಡು, ತನ್ನ ಹೆಸರು, ನಂಬರ್ ಬರೆದುಕೊಟ್ಟ. 'ನಿನಾದ್–**9849024...**'.

----

"ಶ್ರಾವ್ಯಾ?"

"ಮ್...?"

"ನೀನ್ಯಾಕೆ ಮೊಬೈಲ್ ಇಟ್ಕೊಂಡಿಲ್ಲ?"

"ಮ್... ನನಗೆ ಅದರ ಅವಶ್ಯಕತೆ ಬಿದ್ದಿಲ್ಲ!"

"ಎಷ್ಟೊಂದು ತಮಾಷೆ ಗೊತ್ತಾ, ಮೊಬೈಲ್ ಇದ್ರೆ? ಎಸ್ಸೆಮ್ಮೆಸ್‌ಗಳಂತೂ ತುಂಬಾನೇ ಮಜವಾಗಿರ್ತವೆ!"

"ಆಕ್ಚುವಲಿ, ನನ್ನಿಂದಾಗಿ, ನಮ್ಮ ಮನೆಯ ಲ್ಯಾಂಡ್‌ಲೈನ್ ಫೋನ್ ಬಿಲ್ಲೇ ಸಾವಿರ–ಸಾವಿರ ರುಪಾಯಿಯಾಗ್ತಿದೆ, ಅದರ ಜೊತೆಗೇ ನನಗೆ ಮೊಬೈಲ್ ಬೇಕು ಅಂದ್ರೆ ನಮ್ಮಪ್ಪ ಹಾರಿ ಬೀಳ್ತಾರೆ ಅಷ್ಟೇ!"

"ಹೌದಾ? ಅಷ್ಟೊಂದು ಫೋನ್ ಮಾಡ್ತೀಯಾ?" ಅವನು ಅಚ್ಚರಿಯಿಂದ ಕೇಳಿದ.

"ಹೌದು!"

"ಮತ್ತೆ ನನಗೆ ಒಮ್ಮೆಯೂ ಫೋನ್ ಮಾಡಿಲ್ಲ!"

"ನಿನ್ನ ನಂಬರ್ ಸಿಕ್ಕಿದ್ದೇ ಈಗ ತಾನೇ?" ಅವಳು ಅವನ ದಡ್ಡತನಕ್ಕೆ ನಕ್ಕಳು,

"ಸರಿ, ನಾನು ಹೋಗ್ತೀನೋ!" ಅವಳು ಎದ್ದು ಬಸ್‌ನಿಲ್ದಾಣದ ನೆರಳಿನಿಂದ ಪಕ್ಕದಲ್ಲಿದ್ದ ಗುಲ್‌ಮೊಹರ್‌ನ ನೆರಳಿಗೆ ನಡೆದಳು. ಅವನು ಹಿಂಬಾಲಿಸಿದ.

"ಸರಿ ಹಾಗಾದ್ರೆ, ಸಿಗೋಣ!"

"ಸಿಗೋಣ ಅಲ್ಲ, ಮೊದಲು ಫೋನ್ ಮಾಡ್ತೀನಿ, ಸರೀನಾ?" ಅವಳು ಅವನ ಮಾತುಗಳನ್ನು ತಿದ್ದಿದಳು.

"ಸರಿ, ಆದ್ರೆ ಮಧ್ಯಾಹ್ನ ಎರಡು ಗಂಟೆಯೊಳಗೆ ಫೋನ್ ಮಾಡ್ತೀಯಾ ತಾನೇ?"

"ಹೂಂ. ನೀನೂ ಮನೆಗೆ ಹೋಗು, ಇಲ್ಲಿ ಕೂತ್ಕೊಂಡು ಹೊಗೋ-ಬರೋ ಹುಡ್ಗೀರಿಗೆಲ್ಲ ನಿನ್ನ ನಂಬರ್ ಕೊಟ್ಕೊಂಡು ಫೋನ್ ಮಾಡಿ ಅಂತಾ ಕೇಳ್ಕೊಂಡಿರಬೇಡ!" ಇಬ್ಬರೂ ನಕ್ಕರು. ಅವನು ಹಸ್ತ-ಲಾಘವಕ್ಕೋಸ್ಕರವೆಂಬಂತೆ ತನ್ನ ಬಲಗೈ ಚಾಚಿದ. ಅವಳು ತನ್ನ ಹಸ್ತವನ್ನು ಅವನ ಚಾಚಿದ ಹಸ್ತದೊಳಗಿಟ್ಟಳು. ಅವನೇ ಅವಳ ಕೈ ಕುಲುಕುತ್ತ ಜೋರಾಗಿ ನಕ್ಕ.

"ಯಾಕೋ?"

"ಹುಡುಗಿಯರೆಲ್ಲಾ ಹೀಗೇನಾ ಅಂತಾ?"

"ಹೀಗೇ, ಅಂದ್ರೆ?"

"ಸರಿಯಾಗಿ ಹ್ಯಾಂಡ್-ಶೇಕ್ ಕೊಡೋಕೂ ಬರೋಲ್ಲ. ಕೈ ಹಿಡಿದು ಕುಲುಕಿದ್ರೆ ಏನೋ ಗಂಟು ಹೋಗುತ್ತೆ ಅನ್ನೋರ ತರಾ, ಸುಮ್ನೆ ಕೈನ ನಮ್ಮ ಕೈಯೊಳಗೆ ಇಟ್ಟು ಬಿಡ್ತಾರೆ, ಎಲ್ಲಾ ಕೆಲಸ ನಾವೇ ಮಾಡಬೇಕು!"

"ಓಹೋ, ಎಷ್ಟು ಹುಡುಗಿಯರ ಟೆಸ್ಟ್ ಮಾಡಿದೀ..."

ಅವಳ ಮಾತನ್ನು ತುಂಡರಿಸಿ ಅವನು, "ನಾನು ಊಹೆಯ ಮಾತು ಹೇಳಿದೆ, ಗೊತ್ತಾಯ್ತಾ? ಹೀಗೇನಾ ಅಂದೆ, ಹೀಗೇ ಅಂತ ಹೇಳಲಿಲ್ಲ!" ಅಂದು ಅವಳನ್ನು ಕೊನೆಗೂ ಸಿಕ್ಕಿಸಿದ ಖುಷಿಯಲ್ಲಿ ಉಕ್ಕಿಬಂದ ನಗುವನ್ನು ತಡೆದಿಟ್ಟುಕೊಳ್ಳಲಾರದೇ ಜೋರಾಗಿ ನಕ್ಕುಬಿಟ್ಟ.

"ಪರ್ವಾಗಿಲ್ವೇ? ಮಾತನಾಡೋದ್ರಲ್ಲಿ ಇಷ್ಟು ಬೇಗ ಬುದ್ದಿವಂತನಾಗಿಬಿಟ್ಟೆ?"

ಅವಳ ಹಸ್ತವಿನ್ನೂ ಅವನ ಹಸ್ತದೊಳಗೇ ಇತ್ತು.

"ಮತ್ತೇ? ನಿಮ್ಮಂತವರ ಕೈಯಲ್ಲಿ ಸಿಕ್ಕಿ ಹಾಕಿಕೊಂಡ್ರೆ ಬೇಗ ಕಲಿಯೋದೇ!" ಅವನ ಈ ಮಾತಿನಲ್ಲಿ ಅವನನ್ನು ಛೇಡಿಸಲು ಮತ್ತೇನೋ ಸಿಕ್ಕಂತಾಗಿ ಮಾತನಾಡ ಹೊರಟವಳು, ತಕ್ಷಣ ಬೇಡವೆಂದುಕೊಂಡು ನುಡಿದಳು, "ಸರಿ ಹಾಗಾದ್ರೆ, ಬರ್ಲಾ?"

ಅವಳು ಅವನ ಹಸ್ತವನ್ನು ಆದಷ್ಟು ಬಲವಾಗಿ ಅದುಮಿ, ನಂತರ ಅವನೆಡೆಗೆ ಚಿಮ್ಮಿ-ಒಗೆದಂತೆ ಮಾಡಿ, ನಗುತ್ತ ರಸ್ತೆ ದಾಟಿದಳು. ದ್ವಿಮುಖ ರಸ್ತೆಯ ಮಧ್ಯದ ಅಡ್ಡಗಟ್ಟೆಯ ಮೇಲೆ ನಿಂತು ಹಿಂತಿರುಗಿ ನೋಡಿದಳು. ಅವನು ಗುಲ್‌ಮೊಹರ್‌ನ ನೆರಳಲ್ಲಿ ನಿಂತೂ, ಬಿಸಿಲಲ್ಲಿ ಕಾದವನಂತೆ ಕೆಂಪುಕೆಂಪಾಗಿ ನಗುತ್ತಾ ನಿಂತಿದ್ದ. ಅವನೆಡೆಗೆ ಮತ್ತೊಮ್ಮೆ ನಗೆಬೀರಿ, ಆಚೆಯ ರಸ್ತೆ ದಾಟಿ, ನಡೆದು ಹೋದಳು. ಅವಳು ದೃಷ್ಟಿಯಿಂದ ಮರೆಯಾಗುವ ತನಕ ಅಲ್ಲೇ ನಿಂತಿದ್ದ ಅವನು ನಿಟ್ಟುಸಿರು ಬಿಟ್ಟು, ಕಾಲೆಳೆದುಕೊಂಡು ಬಂದು ಮತ್ತೆ ಅದೇ ಬಸ್‌ನಿಲ್ದಾಣದ ಬೆಂಚಿನ ಮೇಲೆ ಕುಳಿತ. ಬಲಗೈ ಹಸ್ತದಲ್ಲಿ ಇನ್ನೂ ಹಬೆಯಾಡುತ್ತಿದ್ದ ಅವಳ ಹಸ್ತದ ಬಿಸುಪನ್ನು ಬೆರಳುಗಳಿಂದ ಸವರಿ, ನೋಡಿಕೊಂಡ, ನಸುನಕ್ಕ. ಎದುರಿಗಿನ ಬಸ್ ನಿಲ್ದಾಣದಲ್ಲಿ ಇನ್ನೂ ಅವನನ್ನೇ ಗಮನಿಸುತ್ತಿದ್ದ ಆ ಇಬ್ಬರು ಯುವಕರನ್ನು ನೋಡಿ, ಗಂಭೀರ ವದನನಾಗಿ ಎಡಗೈಯಲ್ಲಿದ್ದ ಮೊಬೈಲ್‌ನಲ್ಲಿ ಯಾವುದೋ ಒಂದು ಗೇಮ್ ಆಡುತ್ತಾ ಅವಳು ಮಾಡಬಹುದಾದ ಕರೆಗೆ ಕಾಯಲಾರಂಭಿಸಿದ.

**************

*O ye who have your eyeballs vext and tir'd, \ Feast them upon the wideness of the sea;*
*O ye whose ears are dinned with uproar rude \ Or fed too much with cloying melody -*
*Sit ye near some old cavern's mouth and brood \ Until ye start as if the sea nymphs quired.*

**- On the Sea (John Keats)**

ವೈಜಾಗ್‌ನ ಆರ್‌ಕೆ ಬೀಚ್‌ನ ಬಸ್ ನಿಲ್ದಾಣದಲ್ಲಿ ಸಣ್ಣ ಅಂಗಡಿಯ ಮುಂದೆ ಅವನು ಕಾಯುತ್ತಾ ನಿಂತಿದ್ದ. ಅವಳು ಈ ಮಧ್ಯೆ ಎರಡೂ ಹತ್ತಕ್ಕೆ ಫೋನ್ ಮಾಡಿದ್ದಳು!

ಕ್ರಿಕೆಟ್ ಆಡಲು ಕರೆದ, ನಂತರ ಟೀವಿಯಲ್ಲಿ ಕ್ರಿಕೆಟ್ ನೋಡಲು ಕರೆದ ತನ್ನೆಲ್ಲ ಸ್ನೇಹಿತರಿಗೆ ಇಲ್ಲದ್ದೇ ಕಾರಣಗಳನ್ನು ಕೊಟ್ಟು, ಮನೆಗೆ ಹೋದರೆ ಮತ್ತೆ ಹೊರ ಬರಲು ಇನ್ನಷ್ಟು ಕಾರಣಗಳನ್ನು ಕೊಡಬೇಕಾಗುತ್ತದೆ ಎಂದುಕೊಂಡು ಅವಳ ಕರೆ ಬರುವವರೆಗೂ ಆಗ ಕುಳಿತಿದ್ದ ಬಸ್ ನಿಲ್ದಾಣದಲ್ಲೇ ಅವನು ಕಾಯುತ್ತಾ ಕುಳಿತಿದ್ದ. ಕೊನೆಗೂ ಅವಳ ಕರೆ ಬಂದಿತ್ತು. ಇವನು ಢವಢವಿಸುವ ಹೃದಯದೊಂದಿಗೆ "ಹಲೋ" ಅಂದಿದ್ದ.

"ಹಲೋ ನೀಲಿಮಾ! ಇನ್ನು ಕಾಲುಗಂಟೆಗೆಲ್ಲ ಮನೆ ಬಿಡ್ತಾ ಇದೀನಿ ಕಣೋ, ಮೂರಕ್ಕೆಲ್ಲ ಅಲ್ಲಿರ್ತೀನಿ. ಬಸ್‌ಸ್ಟಾಂಡ್‌ನಲ್ಲೇ ಇರು, ನನಗೆ ನಿಮ್ಮ ಮನೆ ರೂಟ್ ಇನ್ನೂ ಕನ್‌ಫ್ಯೂಸಿಂಗ್!" ಅಂತ್ಹೇಳಿ ಅವಳು ಫೋನ್ ಇಟ್ಟು ಬಿಟ್ಟಿದ್ದಳು. ಅವನು ಸಂತೋಷದಿಂದ ಎದ್ದು ಕುಣಿದಾಡುವುದೊಂದು ಬಾಕಿ. ಎದುರುಗಡೆಯ ಬಸ್ ನಿಲ್ದಾಣದಲ್ಲಿ ಆವಾಗಲಿಂದ ಕುಳಿತಿದ್ದ ಇಬ್ಬರು ಹುಡುಗರು ಈಗಿರಲಿಲ್ಲ. ತರಾತುರಿಯಿಂದ ಅಲ್ಲೇ ಇದ್ದ ಹೋಟೆಲ್ ಹೊಕ್ಕು, ಯಾವುದೋ ಒಂದು ಜ್ಯೂಸ್ ಆರ್ಡರ್ ಮಾಡಿ, ಕುಡಿದು, ನಂತರ ಕೈ ತೊಳೆಯುವ ನೆಪದಲ್ಲಿ, ಸಿಂಕ್ ಹತ್ತಿರ ಮುಖ ತೊಳೆದು ಒರೆಸಿಕೊಂಡು, ಅಲ್ಲೇ ಕನ್ನಡಿಯಲ್ಲಿ ತಲೆಗೂದಲು ಸರಿಪಡಿಸಿಕೊಂಡು ಹೊರ ಬಂದು ಆರ್‌ಕೆ ಬೀಚ್‌ಗೆ ಬಸ್ ಹಿಡಿದಿದ್ದ.

ಆರ್‌ಕೆ ಬೀಚ್‌ನ ಈ ಕೊನೆಯ ಬಸ್ ನಿಲ್ದಾಣಕ್ಕೆ ಬರುವ ಬಸ್ಸುಗಳೆಲ್ಲ ಇವನು ನಿಂತಿದ್ದ ಸಣ್ಣ ಜ್ಯೂಸ್ ಅಂಗಡಿಯೆದುರೇ ಎಡದಿಂದ ಬಂದು ನಿಲ್ಲುತ್ತಿದ್ದವು. ಹಾಗಾಗಿ ಬಸ್ಸುಗಳ ಬಾಗಿಲು, ಇಳಿಯುವವರು-ಹತ್ತುವವರು ಇವನಿಗೆ ಕಾಣುತ್ತಿರಲಿಲ್ಲ. ಅಂಗಡಿಯ ಹಿಂದೆ ಸಮುದ್ರದ ಕಿನಾರೆಯುದ್ದಕ್ಕೂ ತಡೆಗೋಡೆಯ ಪ್ರಾಕಾರ, ಅಲ್ಲಲ್ಲಿ ಕೆಳಕ್ಕೆ ಇಳಿದು ಹೋಗಲು ಮೆಟ್ಟಿಲುಗಳು, ಮೆಟ್ಟಿಲುಗಳ ಕೆಳಗೆ ಮರಳಿನ ಹಾಸು, ಮರಳಿನ ಹಾಸಿಗೆಗೆ ನಿರಂತರ ಬಂದು ಅಪ್ಪುಗೆ, ಚುಂಬನವೀಯುವ ನೊರೆಭರಿತ ಅಲೆಗಳು, ಅಲೆಗಳ ಹಿಂದೆ, ತನ್ನ ಮೇಲೆ ಚಾಚಿಕೊಂಡಿರುವ ನೀಲಾಕಾಶದ ಅಗಾಧತೆಗೇ ಸೆಡ್ಡು ಹೊಡೆಯುವಂತೆ ಹರಡಿಕೊಂಡಿರುವ, ತನ್ನೊಳಗೇ ತಾನೇ ಹೊಯ್ದಾಡುತ್ತಿರುವ ಸ್ವಯಂ-ಸಮುದ್ರ, ಮೇಲೆ ನೀಲಾಕಾಶದಲ್ಲಿ ಎಲ್ಲವನ್ನೂ ತನ್ನ ಬಿಸುಪಿನಿಂದ ಕರಗಿಸುವಂತೆ ಉರಿಯುತ್ತಿರುವ ಸುಡು-ಸೂರ್ಯ...

ಬಂದ ಬಸ್ಸುಗಳ ಕಡೆಗೆಲ್ಲ ಬಿಡುಗಣ್ಣಿನಿಂದ ನೋಡುತ್ತಿದ್ದವನ ತಪನೆ ಕೊನೆಗೂ ಕೊನೆಯಾಗುವಂತೆ, ಬಂದ ಒಂದು ಬಸ್ಸಿನಿಂದ ಅವಳು ಇಳಿದಳು. ತಿಳಿನೀಲಿ ಬಣ್ಣದ ಕಸೂತಿಯ ಕಾಟನ್ ಚೂಡಿದಾರ್, ಬಿಳೀ ದಾವಣಿ, ಕೈಗಳ ತುಂಬ ಹಳದೀ ಬಳೆಗಳು, ಬಿಗಿಯಾಗಿ ಕಟ್ಟಿದ ಪೋನಿಟೈಲ್, ಪೌಡರ್ ಪೂಸಿದ ಮುಖ, ಹಣೆಯ ಮೇಲೆ ಸಣ್ಣದೊಂದು ಕಪ್ಪು ಬಾಣದ ಬಿಂದಿ, ಲಿಪ್‌ಸ್ಟಿಕ್‌ನಿಂದ ಕಂಡೂ ಕಾಣದಂತೆ ರಂಗೇರಿದ್ದ ತುಟಿಗಳು. ಅವಳ ಬೆನ್ನಿಗೊಂದು ದಾರ ಬಿಗಿಯುವ ಬಟ್ಟೆಯ ಚೀಲ, ಅದರೊಳಗೆ ಪ್ರಾಯಶಃ ಒಂದೆರಡು ಪುಸ್ತಕಗಳು! ಸುಡುವ ಬಿಸಿಲಿನ ಝಳದಲ್ಲಿ ತಂಪು ತಂಪು ತಂಗಾಳಿಯೊಂದು ತೀಡಿ, ಮೈಮನವನ್ನು ಉಲ್ಲಸಿತ ಮಾಡಿದಂತಾಗಿ, ಜೋರಾಗಿ ಉಸಿರೆಳೆದುಕೊಂಡು ಅವಳೆಡೆಗೆ ನಗುಬೀರಿದ. ಅವಳು ಸಂಕೋಚದಿಂದೆಂಬಂತೆ ನಸುನಗುತ್ತಲೇ ಇವನೆಡೆಗೆ ಬಂದಳು. ಇವನು ಕಿರುಗಣ್ಣಿನಲ್ಲೇ, ನಸುನಗುತ್ತ, ಎರಡೂ ಕೈಗಳನ್ನು ತನ್ನ ಯೂನಿಫಾರ್ಮ್ ಪ್ಯಾಂಟಿನೊಳಕ್ಕೆ ಇಳಿಬಿಟ್ಟು ನಿಂತವನು ಅವಳು ಹತ್ತಿರ ಬಂದಾಗ, 'ಹಾಯ್' ಎಂದು ಕೈಚಾಚಿ, ಇನ್ನಷ್ಟು ತುಟಿಯರಳಿಸಿದ.

"ಏನು? ಹ್ಯಾಂಡ್-ಶೇಕ್ ಟೆಸ್ಟಾ?" ಎಂದು ಅವಳು ಹಲ್ಲು ಕಿರಿದಳು ಮತ್ತು ಅವನ ಚಾಚಿದ ಹಸ್ತಕ್ಕೆ ಫಟ್ಟನೇ ಹೊಡೆದಳು.

----

"ಶ್ರಾವ್ಯಾ?"

"ಏನೋ?"

"ಎಲ್ಲಿಗೆ ಹೋಗೋಣ?"

ಅವರಿಬ್ಬರೂ ಬಸ್‌ನಿಲ್ದಾಣದಿಂದ ಕೆಳಗಿಳಿದು, ಸಮುದ್ರದ ದಡದಗುಂಟ ನಡೆಯಲಾರಂಭಿಸಿದ್ದರು.

"ಇಲ್ಲಿಂದ ಮೊದಲು ಹೈದರಾಬಾದ್‌ಗೆ ಹೋಗೋಣ, ಅಲ್ಲಿಂದ ಮುಂದೆ ತಿರುಪತಿ..." ಫಕ್ಕನೆ ನಕ್ಕಳು, "...ಬಂದಿರೋದೇ ಬೀಚ್ ಸುತ್ತೋಕೆ ಅಂತಾ, ಇಲ್ಲಿಂದ ಎಲ್ಲಿಗೆ ಹೋಗೋಣಾಂದ್ರೆ?"

"ನಾನು ರೆಡಿ, ಹೈದರಾಬಾದ್-ತಿರುಪತಿ ಟ್ರಿಪ್‌ಗೆ!" ಅವನು ತನ್ನ ತಲೆಗೂದಲು ಸರಿ ಮಾಡಿಕೊಂಡ.

“ನಿಮಗೇನ್ರಪ್ಪಾ, ಹುಡುಗರು! ಎಲ್ಲದಕ್ಕೂ ರೆಡಿ ಇರ್ತೀರಿ!”

“ಹಾಗಲ್ಲಾ. ಆಚೆಕಡೆ, ಅಲ್ಲಿ ತೆಂಗಿನ ಮರಗಳು ಕಾಣ್ತಿವೆಯಲ್ಲ, ಅಲ್ಲಿ ಪ್ರೈವೇಟ್ ಬೀಚ್ ಇದೆ, ವಾಟರ್ ಗೇಮ್ಸ್, ಬೋಟಿಂಗ್ ಅಂತೆಲ್ಲಾ ಇದೆ, ಅಲ್ಲಿಗೆ ಹೋಗೋಣ್ವಾಂತ...” ಅವನು ಅವಳಿಗೆ ಬೇಕಿಲ್ಲದ ಸಮಜಾಯಿಷಿ ಕೊಟ್ಟ.

“ಹೌದು, ನಂಗೊತ್ತು, ತುಂಬಾನೇ ಚೆನ್ನಾಗಿದೆ, ನಮ್ಮಪ್ಪ ಅಮ್ಮ, ಅಣ್ಣ-ತಮ್ಮ ಎಲ್ಲಾ ಒಂದ್ ಸರ್ತಿ ಹೀಗೇ ಪಿಕ್‌ನಿಕ್ ತರಾ ಹೋಗಿದ್ವಿ ಅಲ್ಲಿಗೆ!”

“ಹಾಗಾದ್ರೆ...?”

“ಅಲ್ಲಿಗೆಲ್ಲ ಬೇಡಪ್ಪ ಈವಾಗ. ಇದೇ ಬೀಚ್ ಚೆನ್ನಾಗಿದೆ, ವಿಶಾಲವಾಗಿದೆ!” ಅವಳು ಕೈಗಳೆರಡನ್ನೂ ಚಾಚಿ, ತನ್ನ ಸುತ್ತಲೇ ಒಂದು ಸುತ್ತು ತಿರುಗಿದಳು.

“ಸರಿ ಬಿಡು, ಅಲ್ಲಿಗೆ ನೆಕ್ಸ್ಟ್ ಟೈಮ್ ಹೋದ್ರೆ ಆಯ್ತು.”

ಅವನ ಮಾತಿಗೆ ಅವಳು ಆಶ್ಚರ್ಯದಿಂದ ಕಣ್ಣು-ಕಣ್ಣು ಬಿಟ್ಟಳು.

“ಏನೋ ನೀನು? ನೆಕ್ಸ್ಟ್ ಟೈಮ್, ಇನ್ನೊಂದ್ ಸಲ, ಮತ್ತೊಂದ್ ಸಲ ಅಂತೆಲ್ಲ ಪ್ಲಾನ್ ಮಾಡಿದೀಯಾ? ಅತೀ ಆಸೆ ಕಣೋ ನಿಂಗೆ, ಜೊತೆಗೆ ಹುಂಬ ಧೈರ್ಯಾನೂ ಇದೆ?”

ಅವನು ಹೆಮ್ಮೆಯಿಂದೆಂಬಂತೆ ತುಟಿ ಬಿಗಿದು, ಎದೆಯುಬ್ಬಿಸಿದ. ಬೌಲಿಂಗ್ ಮಾಡುವಂತೆ ಸ್ವಲ್ಪ ಓಡಿ, ಜಿಗಿದು, ಕೈಬೀಸಿ, ತನ್ನ ಕೈಯಲ್ಲಿಲ್ಲದ ಚೆಂಡನ್ನು ಸಮುದ್ರದೊಳಕ್ಕೆ ಅಲೆಗಳಾಚೆಗೆ ಎಸೆದಂತೆ ನಟಿಸುತ್ತಾ ಕೇಳಿದ, “ಏನಂತೀಯಾ?”

“ಅಷ್ಟೆಲ್ಲಾ ಆಸೆ ಇಟ್ಕೋಬೇಡ ನೀನು, ಗೊತ್ತಾಯ್ತಾ? ಇದೇ ಲಾಸ್ಟ್!”

“ನಾನು ಮತ್ತೆ ಯಾವಾಗಲಾದ್ರೂ ನಿಮ್ಮ ಮನೆಗೆ ಫೋನ್ ಮಾಡ್ತೀನಿ, ‘ನಾನು ನೀಲಿಮಾ ಮಾತಾಡ್ತಾ ಇರೋದು’ ಅಂತಾ. ನಿಮ್ಮಮ್ಮನ್ನನ್ನೇ ಕೇಳ್ತೀನಿ!” ಅವ್ನು ಜೋರಾಗಿ ನಕ್ಕ. ಅವಳು ತಡೆಯಲಾರದೇ ನಕ್ಕಳು. ಅವನು ಕೆಣಕಿದ.

“ಏನು ನೀಲಿಮಾ ಮನೆಯಲ್ಲಿ ಸ್ಟಡೀಸ್ ಮಾಡೋಕೆ ಬಂದ್ಯಾ? ಬುಕ್ಸ್ ಎಲ್ಲಾ ತಂದ್ಯಾ?”

“ಹೂಂ”

“ನೆಕ್ಸ್ಟ್ ಸರ್ತಿ ಅರೂ ಮನೆಗೆ ಓದ್ಕೋಳೋಕೆ ಬಂದ್ಬಿಡು, ಆಯ್ತಾ?”

“ಏನೋ ನೀನು, ಬ್ಲಾಕ್ ಮೇಲ್ ಮಾಡ್ತಾ ಇದೀಯಾ, ಹೇಗೆ? ಇನ್ನೊಂದ್ ಸರ್ತಿಯ ಸೀನ್ ಎಲ್ಲಾ ಇಲ್ಲ, ಗೊತ್ತಾಯ್ತಾ?...” ಹೆದರಿಸುವಂತೆ ನುಡಿದಳು, “...ನಮ್ಮಣ್ಣ ಜಿಮ್‌ಗೆ ಹೋಗ್ತಿದಾನೆ, ಬಾಡಿ ಬಿಲ್ಡರ್ ಗೊತ್ತಿದೆಯಾ? ನಾನು ಒಂದು ಮಾತು ಹೇಳಿದ್ರೆ ಮುಗೀತು, ನೀನು ಢಮಾರ್!” ಇಬ್ಬರೂ ನಕ್ಕರು.

“ಓಹೋ, ಇದೊಂದ್ ದೊಡ್ಡ ಸಿನೆಮಾ, ನೀನು ದೊಡ್ಡ್ ಹೀರೋಯಿನ್ನು, ನಿಮ್ಮಣ್ಣ ನಿನಗೆ ಬಾಡೀಗಾರ್ಡು...”

“ಓಹೋ, ನೀನು ದೊಡ್ಡ ಹೀ...” ಅವಳು ಮಾತು ಅರ್ಧಕ್ಕೇ ನಿಲ್ಲಿಸಿದಳು, ಕೆಂಪಗಾದಳು. ಮತ್ತೆ ಇಬ್ಬರೂ ನಕ್ಕರು.

----

“ಶ್ರಾವ್ಯಾ?”

“ಮ್...?”

“ಏನಾದ್ರೂ ಕುಡಿಯೋಣ್ವಾ?”

“ಸರಿ, ಇಷ್ಟು ಬೇಗ ನೆನಪಿಗೆ ಬಂತಲ್ಲಾ ನಿನಗೆ!”

ಇಬ್ಬರೂ ಮತ್ತೆ ವಾಪಸ್ಸು ಮರಳು ದಿಣ್ಣೆ ಹತ್ತಿ, ನಂತರದ ಮೆಟ್ಟಿಲುಗಳನ್ನೇರಿ ಅದೇ ಅಂಗಡಿಯ ಬಳಿ ಬಂದರು.

“ನಾನು ಸೆವೆನ್-ಅಪ್ ಕುಡೀತೀನಿ, ನೀನು?” ಅವಳನ್ನು ಕೇಳಿದ.

ಅಂಗಡಿಯ ಒಂದು ಬದಿಗೆ ಸೆವೆನ್-ಅಪ್‌ನ ಮಲ್ಲಿಕಾ ಶೇರಾವತ್ ನಿಂತಿದ್ದ ಹೊಸಾ ಜಾಹೀರಾತಿನ ಚಿತ್ರವಿತ್ತು, ಇವಳು ಕೇಳಿದಳು, “ನಿಂಗೆ ಮಲ್ಲಿಕಾ ಶೇರಾವತ್ ಇಷ್ಟಾನಾ?”

“ಯಾಕೆ?”

“ಸೆವೆನ್-ಅಪ್ ಅಂದ್ಯಲ್ಲಾ, ಅದಕ್ಕೆ!”

“ಹಾಗೇನಿಲ್ಲ, ಅವಳು ಆ ಆಡ್‌ನಲ್ಲಿ ಬರೋಕೂ ಮುಂಚೆಯಿಂದಲೇ ನಂಗೆ ಸೆವೆನ್-ಅಪ್ ಇಷ್ಟ ಇತ್ತು.”

“ಹೌದಾ?”

“ಹೌದು, ಅದ್ರಲ್ಲಿ ಇರೋ ಕಾರ್ಟೂನ್ ಸ್ವಲ್ಪ ನನ್ನ ಥರಾನೇ ಇಲ್ವಾ?” ಅವನು ಕೇಳಿದ.

"ಹೌದು, ಹೌದು. ಸ್ವಲ್ಪ ಏನು? ಪೂರ್ತೀ ಕಾರ್ಟೂನ್ ತರಾನೇ ಕಾಣಿಸ್ತೀಯ, ನೀನು!" ಅವಳು ನಕ್ಕಳು.

"ಮತ್ತೇನು? ಮಲ್ಲಿಕಾ ಶೇರಾವತ್ ಜೊತೆ ಆಡ್ ಮಾಡಿದೀನಿ ಗೊತ್ತಾ ನಾನು. ಆಕ್ಚುವಲಿ, ನಂಗವಳು ಇಷ್ಟ ಆಗ್ತಾಳೆ!"

ಅವಳು ಕೆಟ್ಟ ಕುತೂಹಲದ ಧ್ವನಿಯಲ್ಲಿ ಕೇಳಿದಳು, "ಯಾಕೇ? ಅವಳ್ಯಾಕೆ ಇಷ್ಟಾ?"

"ಯಾಕೇಂದ್ರೆ? ನನಗ್ಗೊತ್ತಿಲ್ಲ..." ಅವಳ ಕುತೂಹಲ ಕಂಡು ಅವನು ಫಕಫಕನೆ ನಕ್ಕ, "... ಸೋ, ನೀನೇನು ಕುಡೀತೀಯಾ?"

"ನಂಗೆ ಪೆಪ್ಸಿ," ಸ್ವಲ್ಪ ತಡೆದು ಮತ್ತೆ ಹೇಳಿದಳು, "ಡಯೆಟ್ ಪೆಪ್ಸಿ ಇದಿಯಾಂತ ಕೇಳು!"

ಅವನೇ ಪ್ಯಾಂಟ್‌ನ ಹಿಂದಿನ ಜೇಬಿನಿಂದ ತನ್ನ ಮಾಸಲು ಪರ್ಸು ತೆಗೆದು ದುಡ್ಡುಕೊಟ್ಟ. ಎರಡೂ ಪಾನೀಯಗಳ ಕ್ಯಾನ್ ಎತ್ತಿಕೊಂಡ ಅವಳಿಗೆ, "ತಡೀ, ಈಗ್ಲೇ ಓಪನ್ ಮಾಡ್ಬೇಡ, ಕೆಳಗಡೆ ಹೋಗೋಣ ಮೊದಲು!" ಅಂದ.

ಚಿಲ್ಲರೆ ತೆಗೆದುಕೊಂಡಾದ ಮೇಲೆ, ಅವನ ಕೈಗೆ ಸೆವೆನ್-ಅಪ್‌ನ ಕ್ಯಾನ್ ಕೊಟ್ಟಳು. ಇಬ್ಬರೂ ತಂತಮ್ಮ ಪಾನೀಯಗಳ ಕ್ಯಾನ್ ಹಿಡಿದುಕೊಂಡು ಮತ್ತೆ ಸಮುದ್ರದ ದಂಡೆಗಿಳಿದರು.

"ಈವಾಗ ಓಪನ್ ಮಾಡು" ಅವನು ಓಪನ್ ಮಾಡಿ, ಅವಳ ಕ್ಯಾನ್‌ಗೆ ಮುಟ್ಟಿಸಿ, "ಚೀರ್ಸ್!!" ಅಂದ. ಸುಡುಬಿಸಿಲಿಗೆ ಆಗಲೇ ಕೆಂಪಗಾಗುತ್ತಿದ್ದ ಅವಳು, ಏನನ್ನೂ ಹೇಳದೇ ತನ್ನ ಕ್ಯಾನ್‌ನಿಂದ ಪೆಪ್ಸಿ ಗುಟುಕರಿಸಿದಳು.

ಅವಳ ಡಯೆಟ್ ಪೆಪ್ಸಿ ಕ್ಯಾನ್ ನೋಡಿ, ಅವನು ಛೇಡಿಸಿದ, "ಏನೂ ಸಕ್ಕತ್ ಡಯಟಿಂಗಾ?"

ಅವಳನ್ನು ಅವಳದೇ ಮಾತಿನಲ್ಲಿ ಸಿಕ್ಕಿಸುವ ಹೊಸ ಯೋಚನೆಯೊಂದು ಅವನ ಮನದಲ್ಲಿ ಮೂಡಿತು.

"ಮ್... ಹಾಗೇನಿಲ್ಲ, ನಂಗೆ ಜಾನ್ ಅಬ್ರಹಾಮ್ ಇಷ್ಟ!" ತನ್ನ ಪೆಪ್ಸಿ ಕ್ಯಾನ್ ಮೇಲೆ ಇದ್ದ ಅಬ್ರಹಾಮ್‌ನ ಚಿತ್ರ ನೋಡುತ್ತಾ ಅವಳು ನುಡಿದಳು.

"ಹೌದಾ? ಯಾಕೆ?"

"ಯಾಕೋ, ಗೊತ್ತಿಲ್ಲ!"

"ಈಗ ಗೊತ್ತಾಯ್ತಾ?", ಅವನು ಮೂದಲಿಸುವ ಧ್ವನಿಯಲ್ಲಿ ನುಡಿದ, "ನಿಂಗೆ ಜಾನ್ ಯಾವ ಕಾರಣಕ್ಕೆ ಇಷ್ಟವೋ ಅದೇ ಕಾರಣಕ್ಕೆ ನಂಗೆ ಮಲ್ಲಿಕಾ ಶೆರಾವತ್ ಇಷ್ಟ!"

"ಥೂ...!" ಅವಳ ಮುಖ ಕೆಂಪಾಯಿತು. ಬಳೆಗಳೇ ತುಂಬಿದ್ದ ತನ್ನ ಎಡಗೈಯನ್ನು ಅವನ ತಲೆಯ ಮೇಲೆ ಮೊಟಕಲು ಎತ್ತಿದಳು. ಅದನ್ನು ನಿರೀಕ್ಷಿಸಿದ್ದಂತೆ ಅವನು ತಟ್ಟನೆ ಕತ್ತು ನಿರುಕಿಸಿ, ಮುಂದಕ್ಕೆ ಬಗ್ಗಿ, ಅವಳ ಕೈ ತಡೆದು ಮಣಿಕಟ್ಟನ್ನು ಹಿಡಿದುಕೊಂಡ. ಅವಳು ಕೈ ಕೊಸರಿಕೊಳ್ಳಲೆತ್ನಿಸಿದಳು, ಅವನು ಬಲವಾಗಿ ಅವಳ ಕೈ ಹಿಡಿದುಕೊಂಡು, ಅವಳೊಡನೆ ಪರೇಡ್ ಮಾಡುವಂತೆ ಕೈ ಬೀಸಿಕೊಂಡು ನಡೆದ. ಅವಳು ಬಲವಾಗಿ ತನ್ನ ಕೈ ಕೊಸರಿ, ಬಿಡಿಸಿಕೊಂಡು ನಿಂತುಬಿಟ್ಟಳು. ಅವನು ಎರಡು ಹೆಜ್ಜೆ ಮುಂದೆ ನಡೆದವನು, ಹಿಂತಿರುಗಿ ನಿಂತು ನೋಡಿದ...

"ಏನು?"

ಅವಳು ಏನಿಲ್ಲವೆಂಬಂತೆ ತಲೆಯಲುಗಿಸುತ್ತ ಅವನ ಮುಖವನ್ನೇ ದಿಟ್ಟಿಸಿ ನೋಡಿದಳು. ಬೆವೆತಿದ್ದ ಹಣೆಯ ಮುಖದಲ್ಲಿ ತುಂಟತನದ ನಗು ಬಿಟ್ಟರೆ ಇನ್ನೇನಿರಲಿಲ್ಲ. ಅವಳು ಹಾಗೇ ನಿಂತದನ್ನು ನೋಡಿ, "ಸಾರಿ..." ಎಂದು ನಸುನಕ್ಕು ಅವನು ಅವಳ ಕೈಗಾಗಿ ತನ್ನ ಎಡಗೈ ಮುಂದೆ ಚಾಚಿದ. ಚಾಚಿದ ಅವನ ಹಸ್ತಕ್ಕೆ ಅವಳು ತನ್ನ ಕೈಯಿಂದ ಉರಿಯುವಂತೆ ಫಟ್ಟನೆ ಹೊಡೆದು, ಅವನಿಗಿಂತ ಮುಂದಕ್ಕೆ ಓಡಿದಳು. ಅವನು ಕತ್ತೆತ್ತಿ ಬಲಗೈಯ ಕ್ಯಾನ್‌ನ ಸೆವೆನ್ ಅಪ್ ಕುಡಿಯುತ್ತ, ಉರಿಯುತ್ತಿದ್ದ ತನ್ನ ಎಡಗೈಯನ್ನು ಕೊಡವಿಕೊಳ್ಳುತ್ತ ಅವಳನ್ನು ಹಿಂಬಾಲಿಸಿದ.

----

"ಶ್ರಾವ್ಯಾ?"

"ಮ್...?"

"ಏನಾದ್ರೂ ಮಾತಾಡು?"

"ಏನು ಮಾತಾಡ್ಲಿ?"

"ಬರೋ ವರ್ಷ ಕಾಲೇಜಿಗೆ ಎಲ್ಲಿ ಸೇರ್ತೀಯಾ?"

"ಗೊತ್ತಿಲ್ಲ!"

"ಯಾಕೆ?"

“ಯಾಕೆ ಅಂದ್ರೆ? ಇನ್ನೂ ಬೋರ್ಡ್ ಎಗ್ಸಾಮ್ಸ್‌ಗೇ ಆರು ತಿಂಗಳಿದೆ, ಆಮೇಲೆ ಕಾಲೇಜು ತಾನೇ? ಈಗ್ಲೇ ಯಾಕೆ ಅದರ ಯೋಚನೆ?”

“ಆದ್ರೂ ಒಂದ್ ಐಡಿಯಾ ಅಂತಾ ಇಲ್ವಾ?”

ಅವಳು ಗಲ್ಲದ ಮೇಲೆ ತೋರುಬೆರಳಿಟ್ಟು, ಗಂಭೀರವಾಗಿ ಯೋಚನೆ ಮಾಡುವಂತೆ ನಟಿಸುತ್ತಾ ನುಡಿದಳು,

“ನೋಡ್ಬೇಕು, ಪುಣೇನೋ, ಕಲ್ಕತ್ತಾನೋ!”

“ಏನು? ಕಾಲೇಜಿಗೆ ಇಲ್ಲಿ ಸೇರೋಲ್ವಾ?” ನಂಬದವನಂತೆ ಕೇಳಿದ.

“ಇಲ್ಲ!”

“ಯಾಕೆ?”

“ಸುಮ್ನೇ. ನನಗೆ ವೈಜಾಗ್ ಇಷ್ಟ ಇಲ್ಲ. ಜೊತೆಗೆ ನೀನು ಬೇರೆ ಬ್ಲಾಕ್‌ಮೇಲ್ ಬೆದರಿಕೆ ಹಾಕ್ತಾ ಇದೀಯಾ!”

“ಓಹ್, ಕಮಾನ್! ಸಕ್ಕತ್ ಕೆಟ್ಟ ಜೋಕ್ ಇದು.” ಅವಳು ನಕ್ಕಳು. ಅವನು ತನ್ನ ಕೈಯಲ್ಲಿದ್ದ ಸೆವೆನ್-ಅಪ್ ಖಾಲಿ ಮಾಡಿದ. ನಂತರ ಶಕ್ತಿಮಾನ್‌ನಂತೆ ತುಟಿ ಬಿಗಿದು, ಎದೆಯುಬ್ಬಿಸಿದ. ಬೌಲಿಂಗ್ ಮಾಡುವಂತೆ ಸ್ವಲ್ಪ ಓಡಿ, ಜಿಗಿದು, ಕೈಬೀಸಿ, ತನ್ನ ಕೈಯಲ್ಲಿದ್ದ ಸೆವೆನ್ ಅಪ್‌ನ ಖಾಲೀ ಕ್ಯಾನನ್ನು ಸಮುದ್ರದೊಳಕ್ಕೆ ಅಲೆಗಳಾಚೆಗೆ ಎಸೆದ. ಅವಳು ಚಪ್ಪಾಳೆ ತಟ್ಟಿದಳು, ಇಬ್ಬರೂ ನಕ್ಕರು.

----

“ಶ್ರಾವ್ಯಾ?”

“ಏನೋ ಮಾರಾಯ?”

“ಏನಾದ್ರೂ ಮಾತಾಡು?”

“ಏನು ಮಾತಾಡ್ಲಿ, ನೀನೇ ಹೇಳು?”

“ನಿನಗೇನೇನು ಇಷ್ಟ ಹೇಳು?”

“ಅಂದ್ರೆ?”

“ಅಂದ್ರೆ, ನಿಂಗೆ ಏನು ಇಷ್ಟ ಅಂತ. ಬಟ್ಟೆ, ಊಟ, ಬುಕ್ಕು, ಜನ...”

“ನಂಗೆ ‘ಚಂದ್ರಕಳಾ’ ಅಂದ್ರೆ ತುಂಬಾ ಇಷ್ಟ, ಬಟರ್‌ಸ್ಕಾಚ್ ಐಸ್ ಕ್ರೀಂ ಕೇಜಿಗಟ್ಲೆ ಕೊಟ್ರೂ ತಿಂದು ಹಾಕ್ತೀನಿ”

“ಬಣ್ಣ?”

“ತಿಳೀ ನೀಲಿ, ಗೊತ್ತಾಗಲ್ವಾ?” ತಟ್ಟನೇ ತನ್ನೆರಡು ಕಾಲುಗಳನ್ನು ಜೋಡಿಸಿ, ನೇರಕ್ಕೆ ನಿಂತು, ತನ್ನ ಸಲ್ವಾರ್ ಕಡೆಗೆ ಕೈತೋರಿಸಿದಳು, “ಬಿಳೀನೂ ಇಷ್ಟ!”

“ಬಟ್ಟೆ?”

“ಸಲ್ವಾರ್!”

“ಪುಸ್ತಕ?”

“ನನ್ನ ಮಾತ್ಸ್ ಬುಕ್!” ಅವಳು ಉಢಾಫೆಯಿಂದೆಂಬಂತೆ ಉತ್ತರಿಸಿದಳು.

“ಅದಲ್ಲ, ಸಬ್ಜೆಕ್ಟ್ ಬಿಟ್ಟು?”

“ಸಧ್ಯಕ್ಕಂತೂ ‘ನ್ಯಾನ್ಸಿ ಡ್ರ್ಯೂ’ ಬುಕ್‌ಗಳು, ಮ್... ಮತ್ತೆ ‘ಹ್ಯಾರಿ ಪಾಟರ್’ ಸೀರೀಸ್, ಕಷ್ಟಪಟ್ಟು ಓದಿ ಮುಗಿಸಿದ್ದಕ್ಕೆ ‘ಲಾರ್ಡ್ ಆಫ್ ದ ರಿಂಗ್ಸ್’ ಕೂಡಾ!”

“ಆಟ?”

“ಏ ಹೋಗೋ! ಇದೊಂಥರಾ ಇಂಟರ್‌ವ್ಯೂ ಅನಿಸ್ತಿದೆ!” ಅವಳು ಮೂಗು ಮುರಿದಳು ಮತ್ತು ತನ್ನ ಕೈಯಲ್ಲಿದ್ದ ಖಾಲಿಯಾದ ಪೆಪ್ಸಿ ಕ್ಯಾನನ್ನು ಸಮುದ್ರದೊಳಕ್ಕೆ ಬೀಸಿ ಎಸೆಯಲು ಯತ್ನಿಸಿದಳು. ಅದನ್ನು ಅವಳ ಕೈಯಿಂದ ತೆಗೆದುಕೊಂಡು, ತಾನೇ ಸಮುದ್ರದೊಳಕ್ಕೆ ಬೌಲ್ ಮಾಡಿದ.

“ಹೋದಾ ನೋಡು, ನಿನ್ನ ‘ಜಾನ್ ಅಬ್ರಹಾಮ್’!”

“ಅವನಿಗಿಂತ ಮೊದಲು ‘ಮಲ್ಲಿಕಾ ಶೇರಾವತ್’ ಅಲ್ಲಿಗೇ ಹೋಗಿದಾಳೆ, ಗೊತ್ತಾಯ್ತಾ?”

“ಇಬ್ಬರೂ ಹೋಗ್ಲಿ ಬಿಡು, ನೀನು ಹೇಳು.”

“ಮ್... ನಾನ್ಯಾವ್ದೂ ಆಟ ಆಡಲ್ಲ. ಚೆಸ್ ಸ್ವಲ್ಪ ಆಡ್ತೀನಿ. ನಮ್ಮನೆ ಟೆರೇಸ್ ಮೇಲೆ ಅಣ್ಣನ ಜೊತೆ ಕೆಲವು ಸರ್ತಿ ಶಟಲ್ ಆಡ್ತೀನಿ, ಅಷ್ಟೇ! ಕ್ರಿಕೆಟ್ ಅಂದ್ರೆ ನೋಡೋಕೂ ಮಹಾ ಬೋರು!” ಅವನೆಡೆಗೆ ನೋಡಿ ನಕ್ಕಳು.

“ಮ್.. ಸರಿ, ಜನ?”

“ಅಂದ್ರೆ?”

“ಪೀಪಲ್, ನಿಂಗ್ಯಾವ ಯಾವ ವ್ಯಕ್ತಿಗಳು ಇಷ್ಟ?”

“ಇದೊಂದು ಪ್ರಶ್ನೆಗೆ ಉತ್ತರ ಕೊಟ್ರೆ ನಂಗೆ ಈ ಕೆಲಸ ಸಿಗುತ್ತಾ ಸರ್?” ಅವಳು ನಾಟಕೀಯವಾಗಿ ಕೇಳಿದಳು.

“ಏನು?” ಅವನಿಗೆ ತಟ್ಟನೆ ಹೊಳೆಯಲಿಲ್ಲ.

“ಈಗ ಇಂಟರ್‌ವ್ಯೂ ಮಾಡ್ತಾ ಇದೀರಲ್ಲಾ, ಈ ಒಂದು ಪ್ರಶ್ನೆಗೆ ಉತ್ತರ ಕೊಟ್ರೆ ಈ ಕೆಲಸ ನಂಗೇ ಸಿಗುತ್ತಾ ಅಂತಾ?”

“ಓಹೋ! ಹಾಗೇ ಅಂದ್ಕೊ, ಈಗ ಹೇಳು?”

“ನಂಗೆ ನಮ್ಮಪ್ಪ ಅಂದ್ರೆ ಪಂಚಪ್ರಾಣ, ಅಮ್ಮ ಅಂದ್ರೇನೂ ತುಂಬಾ ಪ್ರೀತಿ. ನಮ್ಮಣ್ಣ, ತಮ್ಮ ಎಲ್ರೂ ನಂಗಿಷ್ಟ!”

“ಆಮೇಲೆ?”

“ಆಮೇಲೆ, ಚಿರಂಜೀವಿ ಇಷ್ಟ, ಸಿದ್ಧಾರ್ಥ್, ಐಶ್ವರ್ಯಾ ರೈ ಇಷ್ಟ!”

“ಆಮೇಲೆ?”

“ಆಮೇಲೆ ಯಾರು?”

“ಸ್ಕೂಲ್‌ನಲ್ಲಿ?”

“ಮ್... ಸ್ಕೂಲ್‌ನಲ್ಲಿ ಜೆಸಿಂತಾ ಮೇಡಮ್ ಇಷ್ಟ, ಭಾಸ್ಕರ್ ಸರ್ ಕೂಡ ಇಷ್ಟಾ!”

“ಫ್ರೆಂಡ್ಸ್‌ನಲ್ಲಿ?”

“ನನಗಿಷ್ಟ ಇರೋರನ್ನೇ ತಾನೇ ನಾನು ಫ್ರೆಂಡ್ಸ್ ಮಾಡ್ಕೋತೀನಿ? ಮ್... ನೀಲಿಮಾ, ಅರೂ, ನಾಗವೇಣಿ, ಉಜ್ವಲಾ ಎಲ್ರೂ ಇಷ್ಟ. ಸ್ವಲ್ಪ ಸ್ವಲ್ಪ ನಿಮ್ಮ ಮೃದುಲಾನೂ ಇಷ್ಟಾನೇ!” ಅವಳು ಕಣ್ಣು ಮಿಟುಕಿಸಿದಳು. ಅವನು ಹಲ್ಲು ಕಿರಿದು ಕೇಳಿದ,

“ಬಾಯ್ಸ್?”

“ಏನೂ?” ಅವಳು ತಟ್ಟನೆ ನಿಂತಳು.

“ಹುಡುಗರಲ್ಲಿ ಯಾರು ಇಷ್ಟಾ ಅಂತಾ?” ಅವನು ತಡವರಿಸಿದ.

“ಯಾಕೆ?” ಅವಳ ಮಾತು ಸ್ವಲ್ಪವೇ ತೀಕ್ಷ್ಣವಾಯಿತು.

“ಅಲ್ಲಪ್ಪಾ, ನಿಂಗೆ ನಮ್ಮ ಕ್ಲಾಸ್ ಬಾಯ್ಸ್‌ನಲ್ಲಿ ಯಾರು ಇಷ್ಟಾ ಅಂತ ಕೇಳಿದೆ, ಅಷ್ಟೇ!”

“ನಂಗ್ಯಾರೂ ಇಷ್ಟಾ ಇಲ್ಲ!” ಅವಳು ಮುಖ ಊದಿಸಿಕೊಂಡಳು.

ಅವನು ಮತ್ತೆಲ್ಲೋ ನೋಡುವಂತೆ, ಕಿರುಗಣ್ಣಲ್ಲೇ ಅವಳನ್ನು ನೋಡುತ್ತಾ ಕೇಳಿದ, “ಯಾಕೆ?”

“ಯಾಕೇಂದ್ರೆ ಏನರ್ಥ? ನಮ್ಮ ಕ್ಲಾಸಿನ ಹುಡುಗರ ಪೈಕಿ ಯಾರೂ ಇಷ್ಟ ಇಲ್ಲ, ಅಷ್ಟೇ!”

“ಅದೇ ಯಾಕೆ ಯಾರೂ ಇಷ್ಟಾ ಇಲ್ಲಾಂತ?”

“ತಲೆ ಕೆಟ್ಟಿದೆ ನಿನಗೆ! ಇಷ್ಟ ಇದ್ದರೆ ಯಾಕಿಷ್ಟ ಅಂತಾ ಹೇಳಬಹುದು, ಇಷ್ಟವೇ ಇಲ್ಲದ ಮೇಲೆ ಯಾಕೆ ಅಂತ ಹೇಗೆ ಹೇಳೋದು?” ಅವಳಿಗೆ ನಿಜವಾಗಿಯೂ ಕಿರಿಕಿರಿಯಾದದ್ದು ಅವನಿಗೆ ಗೊತ್ತಾಯಿತು, ಆದರೂ ಕೇಳಿದ,

“ನಮ್ಮ ಕ್ಲಾಸಿನ ಯಾವ ಹುಡುಗರೂ ಇಷ್ಟವಿಲ್ಲದ ಮೇಲೆ ಮತ್ತೆ ಯಾರು ಇಷ್ಟಾ?”

“ಅದಕ್ಕೂ ಮೊದಲೇ ಹೇಳಿದ್ನಲ್ಲ, ನಮ್ಮಪ್ಪ, ಅಮ್ಮ, ಅಣ್ಣ...”

“ಅದು ಹಾಗಲ್ಲ. ನಾನು ಏನು ಕೇಳ್ತಾ ಇದೀನಿ ಅಂದ್ರೇ...” ತೀರವನ್ನು ಅಪ್ಪಳಿಸುತ್ತಿರುವ ಅಲೆಗಳೂ ಕೂಡಾ ತಟ್ಟನೆ ನಿಂತು ಉಸಿರು ಬಿಗಿಹಿಡಿದಿವೆ ಅಂತೆನಿಸಿ, ಎಲ್ಲೆಡೆ ನಿಶಬ್ಧವೇ ಆವರಿಸಿದಂತಾಗಿ ಅವನು ಸುಮ್ಮನಾಗಿ ನಿಂತ.

ಅವಳು ತಟ್ಟನೆ ನುಡಿದಳು, “ಬಸ್ಸು!”

“ಏನು?” ಅವನಿಗೆ ಅರ್ಥವಾಗಲಿಲ್ಲ.

“ಈಗ ಐದು ಗಂಟೆಗೆ ಬಸ್ ಇದೆ, ನಾನು ಹೋಗಬೇಕು, ಬೈ!”

ಅವಳು ಥಕ್ಕನೆ ಹಿಂತಿರುಗಿ, ತೀರದಗುಂಟ ವಾಪಸ್ಸು ಬಸ್ ಸ್ಟಾಂಡಿನೆಡೆಗೆ ನಡೆಯಲಾರಂಭಿಸಿದಳು...

“ಶ್ರಾವ್ಯಾ?”

"..."

"ಶ್ರಾವ್ಯಾ?"

"..."

ಅವಳು ಹಿಂತಿರುಗಿ ನೋಡದಂತೆ ವೇಗವಾಗಿ ನಡೆದೇ ನಡೆದಳು. ಅವನು ಕಾಲೆಳೆದುಕೊಳ್ಳುತ್ತಾ ಹಿಂಬಾಲಿಸಿದ.

----

ಅವನು ಬಸ್‌ನಿಲ್ದಾಣಕ್ಕೆ ನೇರವಾಗಿದ್ದ ಸಮುದ್ರ ತೀರದ ಮರಳು ದಿಣ್ಣೆಯನ್ನು ಹತ್ತಿ, ತಡೆಗೋಡೆಯ ಮೆಟ್ಟಿಲುಗಳ ಮೇಲೇರಿ ಬರುವಷ್ಟರಲ್ಲಿ, ಅವಳು ಮಲ್ಲಿಕಾ ಶೇರಾವತ್ ನಿಂತಿದ್ದ ತಂಪು ಪಾನೀಯದ ಅಂಗಡಿಯನ್ನು ದಾಟಿ, ಅಲ್ಲಿ ನಿಂತಿದ್ದ ಸಿಟಿ-ಬಸ್ಸನ್ನು ಹತ್ತುವುದಕ್ಕೋಸ್ಕರ ಅತ್ತ ಕಡೆಗಿದ್ದ ಬಾಗಿಲಿಗೆ ಹೋದಳು.

ದುಸುಮುಸು ಉಸಿರು ಬಿಡುತ್ತ ಅವನು ಅಂಗಡಿಯ ಬಳಿಗೆ ಬರುವಷ್ಟರಲ್ಲಿ ಆ ಬಸ್ಸಿನ ಇಂಜಿನ್ ಶುರುವಾಯಿತು. ಅಂಗಡಿಯೆದುರು ಮೊದಲು ನಿಂತಿದ್ದಲ್ಲೇ ನಿಂತುಬಿಟ್ಟ ಅವನ ಎದೆ ಢವಢವಿಸುತ್ತಿತ್ತು! ಬಸ್ಸು ಚಲಿಸಲಾರಂಭಿಸಿದಾಗ ಏನನ್ನೋ ಕಳೆದುಕೊಂಡ ಶೂನ್ಯ ಭಾವ ಅವನನ್ನು ಆವರಿಸಿಕೊಳ್ಳಲಾರಂಭಿಸಿ, ಮೈಯೆಲ್ಲ ಬೆವರು ಬೆವರಾಯಿತು. ಮದ್ಯಾಹ್ನದ ಊಟ ಬೇರೆ ಮಾಡಿರಲಿಲ್ಲ.

ಬಸ್ಸು ಮುಂದಕ್ಕೆ ಚಲಿಸಿದಾಗ, ಮತ್ತೆ ಅವನ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಯಾಕೆಂದರೆ ಆ ಕಡೆ, ಬಸ್ಸಿನ ಮರೆಯಲ್ಲಿ ಅವಳು ನಿಂತಿದ್ದಳು, ಮುಂದೆ ಹೋಗುತ್ತಿದ್ದ ಬಸ್ಸಿನೊಳಕ್ಕೆ ಹತ್ತಿಕೊಂಡಿರಲಿಲ್ಲ.

"ಹುಹ್!" ಗಪಗಪನೆ ಉಸಿರೆಳೆದುಕೊಳ್ಳುತ್ತ ಯೂನಿಫಾರ್ಮ್ ಪ್ಯಾಂಟಿನ ಎಡ ಜೇಬಿನಲ್ಲಿದ್ದ ಕರ್ಚೀಫ್ ತೆಗೆದುಕೊಂಡು ಮುಖವನ್ನೆಲ್ಲ ತೀಡಿಕೊಳ್ಳುತ್ತ ಅವಳೆಡೆಗೆ ಹೆಜ್ಜೆ ಹಾಕಿದ,

"ಶ್ರಾವ್ಯಾ?"

"ಮ್...?" ಅವಳು ಅವನನ್ನೊಮ್ಮೆ, ಅವನ ಹಿಂದೆ ಇದ್ದ ಸಮುದ್ರವನ್ನೊಮ್ಮೆ ನೋಡುತ್ತಿದ್ದಳು.

"ಈಗ ಬಂದ್ಯಾ? ಇಷ್ಟೊಂದ್ ಲೇಟು? ಮೂರು ಗಂಟೆಗೇ ಇಲ್ಲಿರ್ತೀನಿ ಅಂದಿದ್ದೆ?"

ಅವಳು ಹಲ್ಲು ಕಿರಿದಳು, ಅವನು ಸಮಾಧಾನದ ನಿಟ್ಟುಸಿರು ಬಿಟ್ಟ. ಅವನ ಪರಿಸ್ಥಿತಿ ನೋಡಿ ಅವಳು ಜೋರಾಗಿ ನಕ್ಕಳು,

"ಮದ್ಯಾಹ್ನ ಮನೆಗೆ ಹೋಗಲಿಲ್ವಾ?"

"..."

"ಊಟ ಕೂಡಾ ಮಾಡಿಲ್ಲಾ ಅನ್ಸುತ್ತೆ?"

"..."

ಅವಳು ನಾಟಕೀಯವಾಗಿ ಕೇಳಿದಳು, "ಕುಡಿಯೋಕೆ ಏನಾದ್ರೂ ಕೊಡ್ಸೋಲ್ವಾ?"

"ಬೇಡ ಬಾ, ನಿನಗೆ ಹೊಟ್ಟೆ ಹಸೀತಾ ಇರಬಹುದು, ಅಲ್ಲಿ, ಮೆಟ್ಟಿಲ ಕೆಳಗೆ ಮೆಕ್ಕೆಜೋಳ ಸುಡ್ತಾ ಇರ್ತಾರೆ, ಕೊಡಿಸ್ತೀನಿ!"

ಇಬ್ಬರೂ ನಕ್ಕರು, ಬೆವರೊರೆಸಿಕೊಳ್ಳುತ್ತ ತಡೆಗೋಡೆಯ ಮೆಟ್ಟಿಲುಗಳನ್ನಿಳಿದ ಅವನು ಅಲ್ಲೇ ಪಕ್ಕದಲ್ಲಿದ್ದ ಮೆಕ್ಕೆಜೋಳ ಸುಡುವವರಿಂದ ಎರಡು ತೆನೆ ತೆಗೆದುಕೊಂಡ. ಹಿಂದೆ ಬಂದ ಅವಳು ಈ ಬಾರಿ ತನ್ನ ಬೆನ್ನಿನಲ್ಲಿದ್ದ ಬಟ್ಟೆಯ ಬ್ಯಾಗಿನಿಂದ ತನ್ನ ಪರ್ಸು ತೆಗೆದು ದುಡ್ಡು ಕೊಟ್ಟಳು. ನಂತರ ಇಬ್ಬರೂ ಸಮುದ್ರ ತೀರದಲ್ಲಿ ಮೊದಲು ನಡೆದು ಹೋಗಿದ್ದ ದಿಕ್ಕಿನಲ್ಲೇ ಜೋಳ ತಿನ್ನುತ್ತ ನಡೆಯಲಾರಂಭಿಸಿದರು.

ಎಲ್ಲ ಮತ್ತೆ ಹೊಸದಾಗಿ ನಡೆಯುತ್ತಿದೆ ಎಂಬಂತೆ ಅವಳು ನುಡಿದಳು, "ಇವತ್ತೇನೋ, ನೀನು ಕರೆದುದ್ದಕ್ಕೆ ಬಂದೆ ಅಂದ್ಕೊಂಡು ಬೇರೆ ಏನೇನೋ ಪ್ಲಾನ್ ಹಾಕ್ಕೋಬೇಡ ಗೊತ್ತಾಯ್ತಾ? ಇನ್ನೊಂದ್ ಸರ್ತಿ ಸಿಗೋಣ, ಮತ್ತೊಂದ್ ಸರ್ತಿ ಸಿಗೋಣ ಅನ್ನೋ ತರಹದ ಐಡಿಯಾಗಳನ್ನೂ ಇಟ್ಕೋಬೇಡ!"

ಅವಳು ಗಂಭೀರವಾಗಿ ಅವನನ್ನು ಛೇಡಿಸುತ್ತಿದ್ದರೆ ಅವನು ಮಾತನಾಡಲೂ ವ್ಯವಧಾನವಿಲ್ಲದವನಂತೆ ಕೈಯಲ್ಲಿದ್ದ ಜೋಳದ ತೆನೆಯನ್ನು ಗಬಗಬನೆ ತಿನ್ನುತ್ತಿದ್ದ.

----

"ಶ್ರಾವ್ಯಾ?"

"ಏನೋ ನಿಂದು?"

"ಅಲ್ಲಿ ನೋಡು, ಬೆಳಿಗ್ಗೆ ನಿಮ್ಮ ಮನೆ ಹತ್ರ ಎದುರುಗಡೆ ಬಸ್ ಸ್ಟಾಂಡಿನಲ್ಲಿ ಕೂತು ನಮ್ಮಿಬ್ಬರನ್ನೇ ಗಮನಿಸ್ತಾ ಇದ್ದರಲ್ಲಾ ಇಬ್ರು, ಬರ್ತಾ ಇದಾರೆ!" ಅವಳು ನೋಡಿದಳು. ಎದುರುಗಡೆ ಅವನು ಹೇಳಿದಂತೆಯೇ ಅವರಿಬ್ಬರೂ ಸಮುದ್ರ ತೀರದಲ್ಲಿ ನಡೆದು ಬರುತ್ತಿದ್ದರು. ಕುಳ್ಳಗಿದ್ದವನ ಬೆನ್ನ ಮೇಲೆ ಈಗ ದೊಡ್ಡದೊಂದು ಟ್ರಾವೆಲರ್ಸ್ ಬ್ಯಾಗ್ ಇತ್ತು.

"ಹೌದೋ! ಸೀರಿಯಸ್‌ಲೀ ನಮ್ಮಪ್ಪ ನನ್ನ ಹಿಂದೆ ಸ್ಪೈಸ್ ಬಿಟ್ಟಿದಾರೆ ಕಣೋ!"

“ಅವರು ಟೂರಿಸ್ಟ್ಸ್ ಅಂತಾ ಆವಾಗಲೇ ಹೇಳಿರಲಿಲ್ವಾ ನಾನು! ಈಗ ಬ್ಯಾಗಿದೆ ನೋಡು ಅವರ ಕೈಯಲ್ಲಿ”

ಅವನು ತನ್ನ ಮೆಕ್ಕೆಜೋಳ ಮುಗಿಸಿ, ಖಾಲಿ ತೆನೆಯನ್ನು ಸಮುದ್ರದೊಳಕ್ಕೆ ಮೊದಲಿನಂತೆಯೇ ಬೌಲ್ ಮಾಡಿದ.

“ಏನೋ, ಇಷ್ಟೊಂದು ಬೇಗ ತಿಂದ್ಬಿಟ್ಟೆ? ಇದನ್ನೂ ಮುಗಿಸ್ತೀಯಾ, ತಗೋ?” ತನ್ನ ಕೈಯಲ್ಲಿದ್ದ ಅರ್ಧ ತಿಂದಿದ್ದ ತನ್ನ ಜೋಳದ ತೆನೆಯನ್ನೂ ಅವನಿಗೇ ಕೊಟ್ಟಳು. ಅವನು ಅದನ್ನೂ ತಿನ್ನಲಾರಂಭಿಸಿದ.

ಎದುರುಗಡೆ ಹತ್ತಿರ ಬಂದ ಆ ಇಬ್ಬರು ಯುವಕರು ಇವರಿಬ್ಬರನ್ನು ನೋಡಿ ಸಣ್ಣದಾಗಿ ಪರಿಚಯದ ಕಿರುನಗೆ ಬೀರಿದರು. ಇವರಿಬ್ಬರೂ ಧೈರ್ಯವಾಗಿ ಅದಕ್ಕೆ ಪ್ರತಿಯಾಗಿ ನಸುನಕ್ಕರು. ಅವರಿಬ್ಬರೂ ಇವರನ್ನು ದಾಟಿ, ಹಿಂದೆ ಸಾಗಿ ಹೋದ ಮೇಲೆ ಇವರಿಬ್ಬರೂ ಜೋರಾಗಿ ನಕ್ಕರು.

ಇನ್ನೂ ನಗುತ್ತಲೇ ಅವನು ಅವಳ ಹೆಸರು ಕರೆದ, “ಶ್ರಾವ್ಯಾ?”

“ಮ್...?”

“ಎಂಥಾ ವಿಚಿತ್ರ ಜನಾ ಅಲ್ವಾ?”

“ಮ್... ನಿನಾದ್?”

ಬೆಳಗಿನಿಂದ ಮೊದಲ ಬಾರಿಗೆ ಅವಳು ತನ್ನ ಹೆಸರು ಕರೆದುದನ್ನು ಕೇಳೀ, ಅವನು ಆಚ್ಚರಿಗೊಳಗಾದ, ಗಂಭೀರವಾಗಿ ಕೇಳಿದ, “ಏನು?”

“ಬೆಳಗಿನಿಂದ ನನ್ನ ಹೆಸರು ಕರೆದಷ್ಟು ಸರ್ತಿ ನೀನು ಯಾವುದಾದರೂ ದೇವರ ಹೆಸರು ಕರೆದಿದ್ದರೆ ಇಷ್ಟೊತ್ತಿಗೆ ಆ ದೇವರೇ ಪ್ರತ್ಯಕ್ಷ ಆಗ್ತಿದ್ದನೋ ಏನೋ?” ಅವಳು ಗಹಗಹಿಸಿ ನಕ್ಕಳು, ಅವನು ಖಾಲಿ ಮಾಡಿದ ಎರಡನೇ ಜೋಳದ ತೆನೆಯನ್ನೂ ಸಮುದ್ರದೊಳಕ್ಕೆ ಎಸೆಯುತ್ತ ಅವಳ ನಗುವಿನಲ್ಲಿ ಭಾಗಿಯಾದ.

“ಶ್ರಾವ್ಯಾ?”

“ಮ್...?”

“ಏನಾದ್ರೂ ಮಾತನಾಡು?”

“ಸರಿ, ಈಗ ನಿನ್ನ ಇಂಟರ್ವ್ಯೂ!” ಅವಳು ಜೋರಾಗಿ ಘೋಷಿಸಿದಳು, ಮತ್ತೆ ತೀರಾ ಸಾಮಾನ್ಯವೆಂಬಂತೆ ತನ್ನ ಎಡಗಡೆ ತನ್ನೊಂದಿಗೆ ಹೆಜ್ಜೆ ಹಾಕುತಿದ್ದ ಅವನ ಬಲಗೈಯನ್ನು ತನ್ನ ಎಡಗೈಯೊಳಕ್ಕೆ ತೆಗೆದುಕೊಂಡಳು.

“ಸರೀ, ಆದ್ರೆ ನೀನು ಉತ್ತರ ಕೊಡದಿದ್ದ ಪ್ರಶ್ನೆಗಳಿಗೆ ನಾನೂ ಉತ್ತರ ಕೊಡಲ್ಲ,” ಅವನು ಅವಳ ಎಡ ಹಸ್ತದೊಳಗೆ ಭದ್ರವಾಗಿ ಬಂಧಿಯಾಗಿದ್ದ ತನ್ನ ಬಲಗೈ ಹಸ್ತವನ್ನು ಮೆಲ್ಲನೆ ಬಿಡಿಸಿಕೊಂಡು, ಅವಳ ಹಸ್ತವನ್ನೇ ತನ್ನ ಹಸ್ತದೊಳಕ್ಕೆ ತೆಗೆದುಕೊಂಡ, ಅವಳ ಬೆರಳುಗಳೆಡೆಯಲ್ಲಿ ತನ್ನ ಬೆರಳುಗಳನ್ನು ತೂರಿಸಿಕೊಂಡು ಮುಷ್ಟಿ ಬಿಗಿದ. ಏಕೋ ಎಲ್ಲಾ ನಿರಾಳವಾಗಿಯೂ ಎದೆಯಲ್ಲಿ ಉಸಿರು ಸಿಕ್ಕಂತಾಗಿ, ಎದೆಯುಬ್ಬಿಸಿ ನಿಟ್ಟುಸಿರು ಬಿಟ್ಟು ನಸು ನಕ್ಕ.

“ಅದೆಲ್ಲ ಇಲ್ಲ. ನಾನು ಕೇಳೋ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಟ್ರೇನೇ ನಿನ್ನ ಇನ್ನೊಂದು–ಮತ್ತೊಂದು ಸರ್ತಿಯ ಐಡಿಯಾ ಸಕ್ಸಸ್ ಆಗೋದು!”

“ಹಾಂ! ಏನಂದೇ?” ಅವನು ಸಂಪೂರ್ಣ ಆಚ್ಚರಿಗೊಳಗಾದ. ಅವಳೆಡೆಗೆ ತಿರುಗಿದ.

“ಏನಿಲ್ಲ! ಏನಿಲ್ಲ!” ಅವಳು ತಪ್ಪು ತಿದ್ದಿಕೊಳ್ಳುವ ನಾಟಕವಾಡಿದಳು. ಅವರಿಬ್ಬರೂ ಸಂಜೆ ಬಿಸಿಲಿನಲ್ಲಿ ಕೆಂಪುಕೆಂಪಗಾಗಿ ಹೃದಯ ಪೂರ್ವಕವಾಗಿ ನಗಲಾರಂಭಿಸಿದರು...

**ನನ್ನೆದೆಯೊಳಗೆ ಭೋರ್ಗರೆಯುವ ಸಾಗರಕೆ**
**ಮೊದಲ ತೊದಲಿನ ಹೆದರಿಕೆ; ಅಷ್ಟೇ ಏಕೆ?**
**ಇಲ್ಲಿ ಉಕ್ಕುತಿರುವ ಸಾಗರದೆದೆಯ ಮಾತೂ ಅಲೆ–ಅಲೆ ತೊದಲು...**

**************

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** ks_shivu@yahoo.com